12/02/22 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ತಂದೆ ಬಂದಿದ್ದಾರೆ, ಅನಾಥ ಮಕ್ಕಳನ್ನು ಸನಾಥರನ್ನಾಗಿ ಮಾಡಲು. ಎಲ್ಲರನ್ನು ದುಃಖದಿಂದ ಬಿಡಿಸಿ ಸುಖಧಾಮಕ್ಕೆ ಕರೆದುಕೊಂಡು ಹೋಗಲು"

ಪ್ರಶ್ನೆ: ಕಲ್ಪ-ಕಲ್ಪದಲ್ಲೂ ತಂದೆ ತನ್ನ ಮಕ್ಕಳಿಗೆ ಯಾವ ಧೈರ್ಯ ಕೊಡುತ್ತಾರೆ?

ಉತ್ತರ: ಮಧುರ ಮಕ್ಕಳೇ - ನೀವು ನಿಶ್ಚಿಂತರಾಗಿರಿ. ವಿಶ್ವದಲ್ಲಿ ಶಾಂತಿಯನ್ನು ಸ್ಥಾಪನೆ ಮಾಡಿ. ಸರ್ವರನ್ನು ದುಃಖದಿಂದ ಬಿಡುಸುವುದು ನನ್ನ ಕೆಲಸ. ನಾನು ಬಂದಿದ್ದೀನಿ ನೀವು ಮಕ್ಕಳನ್ನು ಈ ರಾವಣ ರಾಜ್ಯದಿಂದ ಬಿಡಿಸಿ ರಾಮ ರಾಜ್ಯದಲ್ಲಿ ಕರೆದೊಯ್ಯುಲು. ನೀವು ಮಕ್ಕಳನ್ನು ಹಿಂತಿರುಗಿ ಕರೆದುಕೊಂಡು ಹೋಗುವುದು ನನ್ನ ಕರ್ತವ್ಯ ಆಗಿದೆ.

ಗೀತೆ: ಆಕಾಶ ಸಿಂಹಾಸನವನ್ನು ಬಿಟ್ಟು ಬಾ...

ಓಂ ಶಾಂತಿ. ಮಕ್ಕಳು ಗೀತೆಯನ್ನು ಕೇಳಿದಿರಿ, ಮಕ್ಕಳು ನೆನಪು ಮಾಡುತ್ತೀರಿ ತನ್ನ ಪರಮ ಪ್ರಿಯ ಪರಮಪಿತ ಪುನಃ ಬನ್ನಿ. ಏಕೆಂದರೆ ನಮ್ಮ ಮೇಲೆ ಮಾಯೆಯ ನೆರಳು ಬಿದ್ದಿದೆ ಅಥವಾ ರಾವಣ ರಾಜ್ಯ ಆಗಿದೆ. ಎಲ್ಲರೂ ದುಃಖಿಗಳೇ ದುಃಖಿಗಳು ಆಗಿದ್ದೇವೆ. ಹೇಳುತ್ತೀರಿ ನಾವು ಪತಿತರಾಗುತ್ತೇವೆ. ತಂದೆ ಹೇಳುತ್ತಾರೆ - ನಾನು ಕಲ್ಪ ಕಲ್ಪ, ಕಲ್ಪದ ಸಂಗಮ ಯುಗದಲ್ಲಿ ಬರುತ್ತೇನೆ. ಐದು ಸಾವಿರ ವರ್ಷದ ಮೊದಲು ಬಂದಿದ್ದೇವೆ ಪುನಃ ಕಲ್ಪದ ಈ ಸಂಗಮ ಯುಗದಲ್ಲಿ ಬಂದಿದ್ದೇನೆ. ತಂದೆ ಬಂದು ಧೈರ್ಯ ಹೇಳುತ್ತಿದ್ದಾರೆ. ಮಕ್ಕಳೇ ನಿಶ್ಚಿಂತರಾಗಿರಿ. ಇದು ನನ್ನದೇ ಪಾತ್ರ ಆಗಿದೆ ಮಕ್ಕಳು ಹೇಳುತ್ತಾರೆ ತಂದೆ ಬನ್ನಿ, ಬಂದು ಪುನಃ ರಾಜಯೋಗ ಕಲಿಸಿ, ಪತಿತ ಜಗತ್ತನ್ನು ಪಾವನ ಮಾಡಿ, ಈ ಸಮಯದಲ್ಲಿ ಎಲ್ಲರೂ ಅನಾಥರಾಗಿದ್ದಾರೆ. ಅನಾಥರು ಎಂದರೆ ಅವರಿಗೆ ಹೇಳಲಾಗುತ್ತದೆ ಯಾರಿಗೆ ತಂದೆ ತಾಯಿಗಳಿಲ್ಲ, ಯಾರು ಪರಸ್ಪರ ಹೊಡೆದಾಡುತ್ತಾರೆ, ಜಗಳವಾಡುತ್ತಾರೆ. ಎಲ್ಲರೂ ಬಹಳ ದುಃಖಿಗಳಾಗಿದ್ದಾರೆ. ಇಡೀ ಜಗತ್ತಿನಲ್ಲಿ ಅಶಾಂತಿ ಇದೆ. ಆದುದರಿಂದ ಮಕ್ಕಳನ್ನು ದುಃಖದಿಂದ ಮುಕ್ತರನ್ನಾಗಿ ಮಾಡಿ ರಾವಣ ರಾಜ್ಯದಿಂದ ಬಿಡಿಸಿ ರಾಮ ರಾಜ್ಯ, ಸುಖಧಾಮಕ್ಕೆ ಕರೆದುಕೊಂಡು ಹೋಗಲು ಬಂದಿದ್ದೇನೆ. ತಂದೆ ಹೇಳುತ್ತಾರೆ ಇದು ನನ್ನ ಕರ್ತವ್ಯ ಆಗಿದೆ. ಇಡೀ ವಿಶ್ವದ ಅರ್ಥಾತ್ ಎಲ್ಲಾ ಆತ್ಮಗಳ ತಂದೆ ಒಬ್ಬರೇ ಆಗಿದ್ದಾರೆ. ಎಲ್ಲರು ಹೇಳುತ್ತಾರೆ ಹೇ ಬೇಹದ್ದಿನ ತಂದೆ ಈಗ ಮೇಲಿಂದ (ಆಕಾಶ) ಸಿಂಹಾಸನವನ್ನು ಬಿಟ್ಟು ಬಂದಿದ್ದೀರಿ. ಬ್ರಹ್ಮ ಮಹಾತತ್ವದಲ್ಲಿ ಇರುತ್ತೀರಿ. ಇಲ್ಲಿ ಜೀವಾತ್ಮಗಳು ಇರುತ್ತಾರೆ. ಅದಾಗಿದೆ ಆತ್ಮಗಳ ಸ್ಥಾನ ಅದನ್ನು ಬ್ರಹ್ಮಾಂಡ ಎಂದು ಹೇಳಲಾಗುತ್ತದೆ. ತಂದೆ ಮಕ್ಕಳಿಗೆ ತಿಳಿಸುತ್ತಿದ್ದಾರೆ ಇದು ಸುಖ, ದುಃಖದ ಆಟವಾಗಿದೆ. ಕರೆಯುತ್ತೀರಿ ಹೇ ಪರಮಪಿತ ಪರಮಾತ್ಮ ಎಂದು, ಏಕೆಂದರೆ ದುಃಖಿಗಳಾಗಿದ್ದೀರಿ. ಮಕ್ಕಳಿಂದ ಏನು ತಪ್ಪಾಗಿದೆ ಎಂದರೆ ತಂದೆಯನ್ನು ಮರೆತಿದ್ದೀರಿ. ಯಾರು ಗೀತೆಯ ಭಗವಂತ, ಯಾರು ರಾಜಯೋಗ ಕಲಿಸಿದ್ದರು, ಅನಾಥರನ್ನು ಸನಾಥರನ್ನಾಗಿ ಮಾಡಿದ್ದಾರೆ ಅವರನ್ನೇ ತಿಳಿದುಕೊಂಡಿಲ್ಲ. ಹಾಡುತ್ತಾರೆ ಹೇ ಅನಾಥರನ್ನು ಸನಾಥರನ್ನಾಗಿ ಮಾಡುವವರೇ ಎಂದು. ಅನಾಥದಿಂದ ಸನಾಥವನ್ನಾಗಿ ಭಾರತವನ್ನೇ ಮಾಡುತ್ತಾರೆ. ಭಾರತವೇ ಸನಾಥ, ಸದಾ ಸುಖಿಯಾಗಿತ್ತು, ಪವಿತ್ರತೆ ಶಾಂತಿ ಸಂಪತ್ತು ಎಲ್ಲವೂ ಇತ್ತು, ಗೃಹಸ್ಥ ಆಶ್ರಮ ಆಗಿತ್ತು, ಭಾರತ ಮಹಾನ್ ಪವಿತ್ರ ಆಗಿತ್ತು. ಹಾಡುತ್ತಾರೆ ಹದಿನಾರು ಕಲಾ ಸಂಪೂರ್ಣ, ಸಂಪೂರ್ಣ ನಿರ್ವಿಕಾರಿ.... ಇಲ್ಲಿ ಎಲ್ಲರೂ ಅನಾಥರಾಗಿದ್ದಾರೆ. ಅವರಿಗೆ ಗೊತ್ತು ಇಲ್ಲಿ ಹಿಂಸೆ, ಅಹಿಂಸೆ ಎಂದು ಯಾವುದಕ್ಕೆ ಹೇಳಲಾಗುತ್ತದೆ. ಜನ ತಿಳಿದುಕೊಳ್ಳುತ್ತಾರೆ ಗೋಹತ್ಯೆ ಹಿಂಸೆ ಎಂದು ತಂದೆ ಹೇಳುತ್ತಾರೆ ನಂಬರ್ಒನ್ ಶತ್ರು ದೇಹಾಭಿಮಾನ ಆಗಿದೆ, ನಂತರ ಕಾಮ, ಕ್ರೋಧ ಈ ಐದು ವಿಕಾರಗಳು ನಿಮ್ಮ ಶತ್ರುವಾಗಿದೆ. ಯಾವುದು ನಿಮ್ಮನ್ನು ಅನಾಥರನ್ನಾಗಿ ಮಾಡಿವೆ. ತಂದೆ ಹೇಳುತ್ತಾರೆ - ಹೇ ಭಾರತವಾಸೀ ಮಕ್ಕಳೇ ನಿಮಗೆ ನೆನಪಿದೆಯೇ ಸತ್ಯಯುಗದಲ್ಲಿ ನಾವು ಸನಾಥರಾಗಿದ್ದೆವು, ಎಷ್ಟು ಸುಖಿಗಳಾಗಿದ್ದೆವು. ಇಲ್ಲಿ ಯಾರಾದರೂ ಶರೀರ ಬಿಟ್ಟರೆ ಹೇಳುತ್ತಾರೆ ಸ್ವರ್ಗಕ್ಕೆ ಹೋದರು ಎಂದು. ನರಕದಿಂದ ಹೋದರಲ್ಲವೇ. ಹಾಗಾದರೆ ಇದನ್ನು ತಿಳಿಸಬೇಕು ಭಾರತ ಈ ಸಮಯದಲ್ಲಿ ನರಕ ಆಗಿದೆ. ಇದನ್ನು ರೌರವ ನರಕ ಎಂದು ಹೇಳಲಾಗುತ್ತದೆ. ಗರುಡ ಪುರಾಣದಲ್ಲಿ ಕಥೆಗಳು ಇದೆ. ಇದು ಯಾವುದೇ ಬೇರೆ ನದಿ ಅಲ್ಲ. ವಿಕಾರದ ವಿಷದ ಸಾಗರದಲ್ಲಿ ಮುಳುಗಿದ್ದಾರೆ. ಒಬ್ಬರು ಮತ್ತೊಬ್ಬರ ಹತ್ಯೆ ಮಾಡುತ್ತಾರೆ. ದುಃಖ ಕೊಡುತ್ತಿರುತ್ತಾರೆ. ತಂದೆ ತಿಳಿಸುತ್ತಾರೆ ಇದು ಸುಖ ದುಃಖದ ಆಟ ಮಾಡಲ್ಪಟ್ಟಿದೆ. ಈ ರೀತಿಯಂತೂ ಇಲ್ಲ ಈಗೀಗ ನರಕ, ಈಗೀಗ ಸ್ವರ್ಗ, ಯಾರಲ್ಲಿ ಹಣವಿದೆ ಅವರಲ್ಲಿ ಸ್ವರ್ಗ. ಹಾಗಲ್ಲ ಶ್ರೀಮಂತರು ದುಃಖಿಗಳಾಗಿರುತ್ತಾರೆ. ಈ ಸಮಯದಲ್ಲಿ ಇಡೀ ವಿಶ್ವದಲ್ಲಿರುವವರು ಎಲ್ಲರೂ ದುಃಖಿಗಳು ತಂದೆ ಹೇಳುತ್ತಾರೆ ನಿಮ್ಮ ಸತ್ಯ ತಂದೆ-ತಾಯಿ ನಾನೇ ಆಗಿದ್ದೇನೆ. ನೀವೇ ಹಾಡುತ್ತಾ ಬಂದಿದ್ದೀರಿ ನೀವು ತಾಯಿ-ತಂದೆ ಎಂದು ಆದರೆ ಮನುಷ್ಯರಿಗೆ ಗೊತ್ತಿಲ್ಲ. ಲಕ್ಷ್ಮಿ ನಾರಾಯಣ, ರಾಧಾಕೃಷ್ಣರ ಮುಂದೆಯೂ ನೀವೇ ತಂದೆ-ತಾಯಿ ಎಂದು ಹಾಡುತ್ತಾರೆ. ತಂದೆ ರಚಯಿತ ಹಾಗು ರಚನೆಯನ್ನು ಯಾರೂ ತಿಳಿದುಕೊಂಡಿಲ್ಲ. ಇದು ಸೃಷ್ಟಿ ಚಕ್ರ ಆಗಿದೆ. ಮಾಯೆಯ ಚಕ್ರ ಎಂದು ಹೇಳುವುದಿಲ್ಲ. ಮಾಯೆ ಎಂದು ಐದು ವಿಕಾರಗಳಿಗೆ ಹೇಳಲಾಗುತ್ತದೆ. ಧನವನ್ನು ಸಂಪತ್ತು ಎಂದು ಹೇಳಲಾಗುತ್ತದೆ. ಸಂಪತ್ತಿವಾನ್ ಭವ, ಆಯುಷ್ಯವಾನ್ ಭವ, ಪುತ್ರವಾನ್ ಭವ ಈ ಆಶೀರ್ವಾದ ತಂದೆ ಕೊಡುತ್ತಾರೆ. ಉಳಿದವರೆಲ್ಲರೂ ಭಕ್ತಿ ಮಾರ್ಗದ ಗುರುಗಳು. ಜ್ಞಾನ ಸಾಗರ ಒಬ್ಬರೇ ಆಗಿದ್ದಾರೆ ಯಾರಿಗೆ ಹಾಡುತ್ತಾರೆ. ಆದರೆ ಗೀತೆ ಕೇಳಿ ಶ್ರೀಕೃಷ್ಣ ಭಗವಾನುವಾಚ ಎಂದು ಹೇಳುತ್ತಾರೆ.

ಅರೇ ಕೃಷ್ಣ ಭಗವಂತ ಹೇಗೆ ಆಗಲು ಸಾಧ್ಯ. ಈ ರೀತಿ ಮೇಲೆ ಇರುವವರನ್ನು ಕರೆಯುತ್ತಾರೆ ರೂಪ ಪರಿವರ್ತನೆ ಮಾಡಿಕೊಂಡು ಬಾ. ನೀವು ಆತ್ಮಗಳು ರೂಪ ಪರಿವರ್ತನೆ ಮಾಡಿಕೊಂಡಿದ್ದೀರಿ. ತಂದೆಯು ಮನುಷ್ಯ ಶರೀರದಲ್ಲಿಯೇ ಬರುತ್ತಾರೆ, ಎತ್ತಿನ ಮೇಲೆಯಂತೂ ಬರಲು ಸಾಧ್ಯವಿಲ್ಲ. ನೀವು ಹೇಳುತ್ತೀರಿ ಬಾಬಾ ನೀವು ನಮ್ಮ ರೀತಿಯೇ ರೂಪ ಪರಿವರ್ತನೆ ಮಾಡಿಕೊಂಡು ಮನುಷ್ಯ ಶರೀರದಲ್ಲಿ ಬನ್ನಿ ಎಂದು, ನಾನೇನು ಎತ್ತಿನಲ್ಲಿ, ಮೀನಿನಲ್ಲಿ, ಮೊಸಳೆಯಲ್ಲಿ ಬರುವುದಿಲ್ಲ. ಮೊಟ್ಟ ಮೊದಲು ಮನುಷ್ಯ ಸೃಷ್ಟಿ ರಚನೆಯಾಗುತ್ತದೆ ಪ್ರಜಾಪಿತ ಬ್ರಹ್ಮನ ಮೂಲಕ. ಇಬ್ಬರು ತಂದೆ ಆಗುತ್ತಾರೆ - ಒಬ್ಬರು ಪರಮಪಿತ ಪರಮಾತ್ಮ ಶಿವ ಯಾರಿಗೆ ಹೇಳಲಾಗುತ್ತದೆ ಅನಾಥರನ್ನು ಸನಾಥರನ್ನಾಗಿ ಮಾಡುವಂತಹ ತಂದೆ ಬನ್ನಿ ಎಂದು. ಮತ್ತೆ ಹಾಡುತ್ತಾರೆ ಜ್ಞಾನ ಸೂರ್ಯ ಪ್ರಕಟ ಆದಾಗ ಜ್ಞಾನದ ಅಂಧಕಾರ ಸಮಾಪ್ತಿಯಾಯಿತು ಎಂದು. ಆ ಜ್ಞಾನ ಸೂರ್ಯ ಶ್ರೇಶ್ರೇಷ್ಠಾ

ತಿ ಶ್ರೇಷ್ಠ ತಂದೆ ಆಗಿದ್ದಾರೆ. ಈ ಆಟದ ಬಗ್ಗೆಯೂ ತಿಳಿದುಕೊಳ್ಳಬೇಕಾಗಿದೆ. ಭಾರತದಲ್ಲಿಯೇ ಈ ಆಟ ಆಗಿದೆ. ಉಳಿದದ್ದೆಲ್ಲಾ ಸಹ ಪಾತ್ರಗಳು ಆಗಿವೆ. ಭಾರತದ ದೇವಿ ದೇವತಾ ಧರ್ಮವೇ ನಂಬರ್ಒನ್ ಶ್ರೇಷ್ಠ ಆಗಿದೆ. ದೈವೀ ಧರ್ಮ, ದೈವೀ ಕರ್ಮ ಶ್ರೇಷ್ಠ ಆಗಿತ್ತು. ಈಗ ಧರ್ಮ, ಕರ್ಮ ಭ್ರಷ್ಠ ಆಗಿದೆ.

ತಂದೆ ಹೇಳುತ್ತಾರೆ ಮುಖ್ಯ ಧರ್ಮಗಳು ನಾಲ್ಕು ಮೊಟ್ಟ ಮೊದಲ ಧರ್ಮ ಆಗಿದೆ ದೇವೀ ದೇವತಾ ಧರ್ಮ. ಸತ್ಯಯುಗ ಸ್ಥಾಪನೆಯ ಕರ್ತವ್ಯ ಒಬ್ಬ ತಂದೆಯದೇ ಆಗಿದೆ, ಅವರು ಸ್ವರ್ಗದ ರಚಯಿತ ಆಗಿದ್ದಾರೆ. ತಂದೆ ಹೇಳುತ್ತಾರೆ ನಾನು ಕಲ್ಪದ ಒಂದೇ ಸಂಗಮಯುಗದಲ್ಲಿ ಬರುತ್ತೇನೆ. ಮನುಷ್ಯ ಮನುಷ್ಯರಿಗೆ ಅಲ್ಪಕಾಲದ ಸುಖವನ್ನು ಮಾತ್ರ ಕೊಡಲು ಸಾಧ್ಯ. ಇದಾಗಿದೆ ದುಃಖದ ಜಗತ್ತು ದುಃಖಿಗಳಾಗಿ ಕೂಗುತ್ತಿದ್ದಾರೆ. ಭಾರತ ಸುಖಧಾಮ ಆಗಿತ್ತು ಈಗ ದುಃಖಧಾಮ ಆಗಿದೆ. ಶಾಂತಿಧಾಮದಿಂದ ಬಂದಿದ್ದೀರಿ, ಈಗ ನಾಟಕ ಮುಗಿಯುತ್ತಾ ಬಂದಿದೆ. ಈಗ ಈ ಶರೀರ ಹಳೆಯದಾಗಿದೆ. ಗೃಹಸ್ಥದಲ್ಲಿದ್ದು ಪವಿತ್ರರಾಗಿರಬೇಕು. ನಾನು ನಿಮ್ಮ ತಂದೆ ಬಂದಿದ್ದೇನೆ ಪವಿತ್ರ ಸ್ವರ್ಗವನ್ನು ಸ್ಥಾಪನೆ ಮಾಡಲು. ಪವಿತ್ರವಾಗಿತ್ತು. ಈಗ ಅಪವಿತ್ರವಾಗಿದೆ. ಅರ್ಧಕಲ್ಪ ರಾಮ ರಾಜ್ಯ ಆಗಿದೆ, ಅರ್ಧಕಲ್ಪ ರಾವಣ ರಾಜ್ಯ. ಈಗ ನೀವು ಈಶ್ವರನ ಮಡಿಲಿನಲ್ಲಿ ಇದ್ದೀರಿ. ಇದು ಈಶ್ವರೀಯ ಪರಿವಾರವಾಗಿದೆ. ಶಿವ ಬಾಬಾ ತಾತಾ ಆಗಿದ್ದಾರೆ. ಪ್ರಜಾಪಿತ ತಂದೆ ಆಗಿದ್ದಾರೆ. ಇದೇ ವಾಸ್ತವಿಕತೆ ಆಗಿದೆ. ನಿಮಗೆ ಗೊತ್ತಿದೆ ನಿರಾಕಾರ ತಂದೆ ಮನುಷ್ಯ ಶರೀರದಲ್ಲಿ ಪ್ರವೇಶ ಮಾಡಿದ್ದಾರೆ, ಆ ತಂದೆ ಕುಳಿತು ಆತ್ಮಗಳ ಜೊತೆ ಮಾತನಾಡುತ್ತಿದ್ದಾರೆ. ಅವರಿಗೆ ಆತ್ಮೀಯ ಸರ್ಜನ್ ಎಂದು ಹೇಳಲಾಗುತ್ತದೆ, ಆತ್ಮಕ್ಕೆ ಇಂಜೆಕ್ಷನ್ ಹಾಕುತ್ತಾರೆ. ಆತ್ಮ ನಿರ್ಲೇಪ ಎಂದು ಹೇಳುತ್ತಾರೆ. ಆದರೆ ಆತ್ಮ ಹೇಗೆ ನಿರ್ಲೇಪ ಆಗಲು ಸಾಧ್ಯ, ಆತ್ಮದಲ್ಲಿಯೇ ಸಂಸ್ಕಾರ ಇದೆ ಅದರನುಸಾರ ಜನ್ಮ ಪಡೆಯುತ್ತದೆ. ಈಗ ನೀವು ಮಕ್ಕಳು ಪರಮಪಿತ ಪರಮಾತ್ಮನನ್ನು ತಿಳಿದಿಕೊಂಡಿದ್ದೀರಿ. ಎಲ್ಲರೂ ಅವರನ್ನೇ ನೆನಪು ಮಾಡುತ್ತಾರೆ. ಹೇ ಪತಿತ ಪಾವನ ಪರಮಾತ್ಮ ನೀವು ಈ ಮನುಷ್ಯ ಸೃಷ್ಟಿಯ ಬೀಜರೂಪ ತಂದೆ ಆಗಿದ್ದೀರಿ, ಚೈತನ್ಯ ಆಗಿದ್ದೀರಿ, ಜ್ಞಾನ ಸಾಗರ ಆಗಿದ್ದೀರಿ ಎಲ್ಲಾ ಜ್ಞಾನ ಆತ್ಮದಲ್ಲಿಯೇ ಇದೆ. ನಂತರ ಸಂಸ್ಕಾರದನುಸಾರ ವಿದ್ಯೆಯಿಂದ ರಾಜ ಆಗುತ್ತೀರಿ. ತಂದೆಯಲ್ಲಿ ಜ್ಞಾನದ ಸಂಸ್ಕಾರ ಇದೆ. ಸೃಷ್ಟಿಯ ಆದಿ, ಮಧ್ಯ, ಅಂತ್ಯದ ಸಂಸ್ಕಾರ ಇದೆ. ನಿಮ್ಮನ್ನು ತ್ರಿಕಾಲದರ್ಶಿಗಳನ್ನಾಗಿ ಮಾಡುತ್ತೇನೆ. ನಿಮಗೆ ತಿಳಿದಿದೆ ನಾವು ಆತ್ಮಗಳು ಮೂಲವತನದಿಂದ ಬಂದಿದ್ದೇವೆ. ಬ್ರಹ್ಮತತ್ವವನ್ನು ಪರಮಾತ್ಮ ಎಂದು ಹೇಳಲು ಸಾಧ್ಯವಿಲ್ಲ. ತಂದೆ ಬಂದು ಹೇಳುವ ಜ್ಞಾನದ ಹೆಸರೇ ಗೀತೆ ಆಗಿದೆ. ತಂದೆಯೇ ಬಂದು ರಾಜಧಾನಿಯನ್ನು ಸ್ಥಾಪನೆ ಮಾಡುತ್ತಿದ್ದಾರೆ. ಅನ್ಯರು ಯಾರೂ ರಾಜಧಾನಿಯನ್ನು ಸ್ಥಾಪನೆ ಮಾಡಲು ಸಾಧ್ಯವಿಲ್ಲ. ಈಗ ರಾಜಧಾನಿ ಸ್ಥಾಪನೆ ಆಗಬೇಕಾಗಿದೆ ಆದ್ದರಿಂದ ಪವಿತ್ರರಾಗಬೇಕು. ಈಗ ತಂದೆ ಮಕ್ಕಳಿಗೆ ಜ್ಞಾನದಿಂದ ಪವಿತ್ರರನ್ನಾಗಿ ಮಾಡಿ ಧನಿಕರನ್ನಾಗಿ ಮಾಡುತ್ತಿದ್ದಾರೆ. ಡ್ರಾಮಾದ ಅರ್ಥವನ್ನು ಯಾರೂ ತಿಳಿದುಕೊಂಡಿಲ್ಲ. ಇದು ಅನಾದಿ ಅವಿನಾಶಿ ಡ್ರಾಮಾ ಆಗಿದೆ. ಎಲ್ಲ ಆತ್ಮಗಳಿಗೆ ಅವಿನಾಶಿ ಪಾತ್ರ ಸಿಕ್ಕಿದೆ, ಇದರಲ್ಲಿ ಪರಮಾತ್ಮನ ಪಾತ್ರವೂ ಇದೆ. ತಂದೆ ಹೇಳುತ್ತಾರೆ ಶಿವ ಅಂದರೆ ಇಷ್ಟು ದೊಡ್ಡ ಲಿಂಗ ಅಲ್ಲ. ಅವರಿಗೆ ಹೇಳಲಾಗುತ್ತದೆ ಪರಮಪಿತ ಪರಮಾತ್ಮ, ಆತ್ಮದ ರೂಪ ಏನು? ಭೃಕುಟಿಯ ಮಧ್ಯದಲ್ಲಿ ನಕ್ಷತ್ರ ಪ್ರಕಾಶವಾಗಿ ಹೊಳೆಯುತ್ತದೆ. ಇಷ್ಟು ಚಿಕ್ಕ ಆತ್ಮದಲ್ಲಿ ಅದೆಷ್ಟು ದೊಡ್ಡ ಪಾತ್ರವಿದೆ. "ಅದ್ಭುತ ಅಲ್ಲವೇ"! ತಂದೆ ಹೇಳುತ್ತಾರೆ - ನಾನು ಆತ್ಮದಲ್ಲಿಯೂ ಪಾತ್ರವಿದೆ. ಭಕ್ತಿ ಮಾರ್ಗದಲ್ಲಿ ನಾನು ನಿಮ್ಮ ಎಷ್ಟೊಂದು ಸೇವೆ ಮಾಡುತ್ತೇನೆ. ಈ ಸಮಯದಲ್ಲಿ ಎಷ್ಟು ಅದ್ಭುತ ಪಾತ್ರವಿದೆ. ಕಲ್ಪಕಲ್ಪದಲ್ಲಿ ನೀವು ಮಕ್ಕಳ ಪಾತ್ರ ನಡೆಯುತ್ತಿರುತ್ತದೆ. ಪಾತ್ರಧಾರಿಗಳು ನಂಬರ್ವಾರ್ ಇದ್ದಾರೆ. ಎಲ್ಲರಿಗಿಂತ ಮೊದಲು ತಂದೆ. ತಂದೆಯಲ್ಲಿ ಇರುವ ಜ್ಞಾನವನ್ನು ಎಲ್ಲರಿಗೂ ಕೊಡುತ್ತಾರೆ. ತಂದೆ ಹೇಳುತ್ತಾರೆ ಮಕ್ಕಳೇ ಈಗ ರಾಜಧಾನಿ ಸ್ಥಾಪನೆಯಾಗುತ್ತಿದೆ. ಈಗ ಪುರುಷಾರ್ಥ ಮಾಡಿ ಶ್ರೇಷ್ಠ ಪದವಿ ಪಡೆದುಕೊಳ್ಳಿ, ಯಾವ ಪದವಿ ಬೇಕಾದರೂ ಪಡೆದುಕೊಳ್ಳಿ. ಪ್ರಾಲಬ್ಧ ಪಡೆಯಲು, ಬೇಹದ್ದಿನ ತಂದೆಯಿಂದ ಬೇಹದ್ದಿನ ಸುಖವನ್ನು ಪಡೆಯಲು ಪುರುಷಾರ್ಥ ಮಾಡಬೇಕು. ಜಗದಂಬೆಗೆ ಹೇಳಲಾಗುತ್ತದೆ ಜ್ಞಾನ ದೇವತೆ. ಯಾರಿಂದಜ್ಞಾನ ಪ್ರಾಪ್ತಿಯಾಯಿತು? ಬ್ರಹ್ಮಾರವರಿಂದ, ಬ್ರಹ್ಮಾರವರಿಗೆ ನೀಡಿದವರಾರು? ಶಿವ ಪರಮಾತ್ಮ. ಬ್ರಹ್ಮಾರವರಿಂದ ಬ್ರಹ್ಮಾಕುಮಾರ, ಬ್ರಹ್ಮಾಕುಮಾರಿಯರಿಗೆ ಜ್ಞಾನ ಪ್ರಾಪ್ತಿಯಾಗುತ್ತಿದೆ. ಇದು ರುದ್ರ ಜ್ಞಾನ ಯಜ್ಞ. ಇದರಲ್ಲಿ ಇಡೀ ಹಳೆಯ ಜಗತ್ತು ಸ್ವಾಹ ಆಗಿ ಬಿಡುತ್ತದೆ. ಹಬ್ಬಗಳು ಈ ಸಂಗಮಯುಗದ್ದೇ ಆಗಿದೆ. ಶಿವನ ಬದಲು ಕೃಷ್ಣನ ಜನ್ಮವನ್ನು ರಾತ್ರಿಯಲ್ಲಿ ತೋರಿಸಿದ್ದಾರೆ. ಆದ್ದರಿಂದ ಶಿವರಾತ್ರಿ ಅರ್ಥ ಯಾರಿಗೂ ಗೊತ್ತಿಲ್ಲ. ಕಲಿಯುಗ ರಾತ್ರಿಯಾಗಿದೆ ಸತ್ಯಯುಗ ಹಗಲಾಗಿದೆ. ಈ ಶಿವಶಕ್ತಿ ಸೈನ್ಯ ಭಾರತವನ್ನು ಸ್ವರ್ಗ ಮಾಡುವಂತಹುದ್ದಾಗಿದೆ. ನೋಡಿ ಹೇಗೆ ಗುಪ್ತವಾಗಿ ಕುಳಿತು ಓದುತ್ತಿದ್ದಾರೆ. ಯೋಗಬಲದಿಂದ ರಾಜ್ಯ ತೆಗೆದುಕೊಳ್ಳುತ್ತೀರಿ,

ಪ್ರಾಚೀನ ರಾಜಯೋಗ ಪ್ರಸಿದ್ಧಿ ಇದೆ ಯಾವುದರಿಂದ ವಿಶ್ವದ ರಾಜ್ಯಭಾಗ್ಯ ಪ್ರಾಪ್ತಿಯಾಗುತ್ತದೆ. ಎಲ್ಲರೂ ಪಾವನರು ಆಗಿ ಬಿಡುತ್ತಾರೆ. ಈ ಜ್ಞಾನವನ್ನು ಆತ್ಮ ಧಾರಣೆ ಮಾಡುತ್ತಿದೆ. ಆತ್ಮದ ಜ್ಞಾನವು ಬೇರೆ ಯಾರಲ್ಲಿಯೂ ಇಲ್ಲ. ಅಲ್ಲಿ (ಸತ್ಯಯುಗದಲ್ಲಿ) ಆತ್ಮ ಜ್ಞಾನ ಇರುತ್ತದೆ. ಆದರೆ ಪರಮಾತ್ಮನ ರಚನೆಯ ಜ್ಞಾನ ಇರುವುದಿಲ್ಲ. ಈ ಜ್ಞಾನ ಕೇವಲ ನೀವು ಬ್ರಾಹ್ಮಣರಿಗೆ ಇದೆ. ನೀವು ಎಲ್ಲರಿಗಿಂತ ಶ್ರೇಷ್ಠರು ಆಗಿದ್ದೀರಿ. ಆತ್ಮೀಯ ಸೇವೆಯನ್ನು ಮಾಡುತ್ತೀರಿ. ಒಬ್ಬರೇ ಪ್ರಯಾಣಿಕ ಬರುತ್ತಾರೆ. ನೀವು ಪ್ರಿಯತಮೆಯರನ್ನು ಸುಂದರರನ್ನಾಗಿ ಮಾಡುತ್ತಾರೆ. ಒಬ್ಬರೇ ಪ್ರಯಾಣಿಕ ಉಳಿದವರೆಲ್ಲರೂ ಪ್ರಿಯತಮೆಯರು ಪ್ರಜೆಗಳು ಆಗುವಂತಹವರು. ಮುಕ್ತಿಧಾಮದಲ್ಲಿ ನಿವಾಸ ಮಾಡುವಂತಹವರ ದೊಡ್ಡ ಮೆರವಣಿಗೆ ಇದೆ. ಪ್ರಿಯತಮ ಬರುವುದೇ ಎಲ್ಲರಿಗೂ ಶೃಂಗಾರ ಮಾಡಿ ಕರೆದುಕೊಂಡು ಹೋಗಲು. ಎಲ್ಲರೂ ಸೊಳ್ಳೆಗಳ ಸದೃಶ್ಯ ಮನೆಗೆ ಹೋಗುತ್ತಾರೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯ ಸಾರಾಂಶ:

1. ಲೈಟ್ ಹೌಸ್ ಆಗಬೇಕಾಗಿದೆ. ಒಂದು ಕಣ್ಣಿನಲ್ಲಿ ಶಾಂತಿಧಾಮ ಮತ್ತೊಂದು ಕಣ್ಣಿನಲ್ಲಿ ಸುಖಧಾಮ ಇರಲಿ. ದುಃಖಧಾಮವನ್ನು ನೋಡಿದರೂ ನೋಡದಂತೆ ಇರಬೇಕು.

2. ತಂದೆ ಸಮಾನ ಜ್ಞಾನದಲ್ಲಿ ಪೂರ್ಣ ಆಗಿ. ಬೇಹದ್ದಿನ ಸುಖವನ್ನು ಪಡೆಯಲು ಸಂಪೂರ್ಣ ಪುರುಷಾರ್ಥ ಮಾಡಿ, ನೀವು ಪಡೆದಂತಹ ಜ್ಞಾನವನ್ನು ಅನ್ಯರಿಗೂ ಕೊಡಿ.

ವರದಾನ: ಸರ್ವ ಪ್ರಾಪ್ತಿಗಳ ಸ್ಮೃತಿಯಿಂದ ಆಲಸ್ಯಕ್ಕೆ ವಿಚ್ಛೇದನ ಕೊಡುವಂತಹ ಖುಷಿಗಳ ಖಜಾನೆಯಿಂದ ಸಂಪನ್ನ ಭವ.
ಸಂಗಮಯುಗದಲ್ಲಿ ಎಲ್ಲಾ ಬ್ರಾಹ್ಮಣ ಮಕ್ಕಳಿಗೂ ತಂದೆಯ ಮೂಲಕ ಖುಷಿಯ ಖಜಾನೆಯು ಸಿಕ್ಕಿರುತ್ತದೆ, ಆದ್ದರಿಂದ ಭಲೆ ಶರೀರವೇ ಹೊರಟು ಹೋಗಲಿ, ಏನಾದರೂ ಆಗಲಿ ಆದರೆ ಖುಷಿಯ ಖಜಾನೆಯನ್ನು ಬಿಡುವುದಿಲ್ಲ. ಸದಾ ಸರ್ವ ಪ್ರಾಪ್ತಿಗಳ ಸ್ಮೃತಿಯಲ್ಲಿ ಇರುತ್ತೀರೆಂದರೆ ಆಲಸ್ಯಕ್ಕೆ ವಿಚ್ಛೇದನವು ಸಿಕ್ಕಿ ಬಿಡುತ್ತದೆ. ಭಲೆ ವ್ಯಾಪಾರ ಕಾರ್ಯದಲ್ಲಿ ನಷ್ಟವೇ ಆಗುತ್ತದೆಯೆಂದರೂ, ಮನಸ್ಸಿನಲ್ಲಿ ಬೇಸರದ ಪ್ರಕಂಪನಗಳು ಬರಬಾರದು ಏಕೆಂದರೆ ಅಕೂಟ ಪ್ರಾಪ್ತಿಗಳ ಮುಂದೆ ಇದೇನು ದೊಡ್ಡ ಮಾತು! ಒಂದುವೇಳೆ ಖುಷಿಯಿದೆಯೆಂದರೆ ಎಲ್ಲವೂ ಇದೆ, ಖುಷಿಯಿಲ್ಲದಿದ್ದರೆ ಏನೂ ಇಲ್ಲ.

ಸ್ಲೋಗನ್: ಮಾಸ್ಟರ್ ದುಃಖಹರ್ತ, ಸುಖಕರ್ತನ ಪಾತ್ರವನ್ನು ಅಭಿನಯಿಸುವುದಕ್ಕಾಗಿ ಸರ್ವ ಪ್ರಾಪ್ತಿಗಳಿಂದ ಸಂಪನ್ನರಾಗಿರಿ.

ಮಾತೇಶ್ವರಿಯವರ ಅಮೂಲ್ಯ ಮಹಾವಾಕ್ಯ:

ಭಗವಾನುವಾಚ ಮಕ್ಕಳ ಪ್ರತಿ - ಮಕ್ಕಳೇ, ಈ ಗುರು ಮತ, ಶಾಸ್ತ್ರ ಮತವು ನನ್ನ ಮತವಲ್ಲ. ಇವರಂತು ಕೇವಲ ನನ್ನ ಹೆಸರಿನ ಮತವನ್ನು ಕೊಡುತ್ತಾರೆ ಆದರೆ ನನ್ನ ಮತವನ್ನಂತು ನಾನೇ ತಿಳಿದಿದ್ದೇನೆ, ನನ್ನನ್ನು ಮಿಲನವಾಗಲು ವಿಳಾಸವನ್ನೂ ನಾನೇ ಬಂದು ಕೊಡುತ್ತೇನೆ, ಅದಕ್ಕೆ ಮೊದಲು ನನ್ನ ವಿಳಾಸವನ್ನು ಯಾರೂ ತಿಳಿದಿರುವುದಿಲ್ಲ. ಗೀತೆಯಲ್ಲಿ ಭಲೆ ಭಗವಾನುವಾಚ ಇದೆ ಆದರೆ ಗೀತೆಯನ್ನೂ ಮನುಷ್ಯನೇ ತಿಳಿಸಿದ್ದಾರೆ. ಭಗವಂತನಂತು ಸ್ವಯಂ ಜ್ಞಾನದ ಸಾಗರನಾಗಿದ್ದಾರೆ, ಭಗವಂತನು ಯಾವ ಮಹಾವಾಕ್ಯವನ್ನು ತಿಳಿಸಿದ್ದಾರೆಯೋ ಅದರ ನೆನಪಾರ್ಥವಾಗಿ ಗೀತೆಯಾಗಿದೆ. ಈ ವಿದ್ವಾನ, ಪಂಡಿತ, ಆಚಾರ್ಯರು ಇದನ್ನೇ ಹೇಳುತ್ತಾರೆ - ಪರಮಾತ್ಮನು ಸಂಸ್ಕೃತದಲ್ಲಿ ಮಹಾವಾಕ್ಯವನ್ನು ಉಚ್ಚರಿಸಿದರು, ಅದನ್ನು ಕಲಿತುಕೊಳ್ಳದೆ ಪರಮಾತ್ಮನು ಸಿಗಲು ಸಾಧ್ಯವಿಲ್ಲ. ಈ ಮಾತಂತು ಇನ್ನಷ್ಟು ಉಲ್ಟಾ ಕರ್ಮ ಕಾಂಡದಲ್ಲಿ ಸಿಲುಕಿಸಿ ಬಿಟ್ಟಿದೆ. ವೇದ, ಶಾಸ್ತ್ರಗಳನ್ನು ಓದುತ್ತಾ ಏಣಿಯನ್ನೇರಬೇಕು, ಆದರೂ ಇಳಿಯುವುದೇ ಆಗುತ್ತದೆ ಅರ್ಥಾತ್ ಅದನ್ನು ಮರೆತು ಒಬ್ಬ ಪರಮಾತ್ಮನೊಂದಿಗೆ ಬುದ್ಧಿಯೋಗ ಜೋಡಿಸಬೇಕಾಗುತ್ತದೆ. ಏಕೆಂದರೆ ಪರಮಾತ್ಮನು ಸ್ಪಷ್ಟವಾಗಿ ಹೇಳುತ್ತಾರೆ - ಈ ಕರ್ಮಕಾಂಡ, ವೇದ, ಶಾಸ್ತ್ರಗಳನ್ನು ಓದುವುದರಿಂದ ನನ್ನ ಪ್ರಾಪ್ತಿಯಾಗುವುದಿಲ್ಲ. ನೋಡಿ - ಧ್ರುವ, ಪ್ರಹ್ಲಾದ, ಮೀರಾ ಇವರೆಲ್ಲರೂ ಯಾವ ಶಾಸ್ತ್ರಗಳನ್ನು ಓದಿದರು? ಇಲ್ಲಂತು ಓದಿರುವುದೆಲ್ಲವನ್ನೂ ಮರೆಯಬೇಕಾಗುತ್ತದೆ, ಹೇಗೆ ಅರ್ಜುನನು ಓದಿರುವುದೆಲ್ಲವನ್ನೂ ಮರೆಯಬೇಕಾಯಿತು. ಭಗವಂತನ ಸ್ಪಷ್ಟವಾದ ಮಹಾವಾಕ್ಯವಿದೆ - ಶ್ವಾಸ-ಶ್ವಾಸದಲ್ಲಿಯೂ ನನ್ನನ್ನು ನೆನಪು ಮಾಡಿರಿ, ಇದರಲ್ಲಿ ಇನ್ನೇನು ಮಾಡುವ ಅವಶ್ಯಕತೆಯಿಲ್ಲ. ಎಲ್ಲಿಯವರೆಗೆ ಈ ತಿಳುವಳಿಕೆ ಇರುವುದಿಲ್ಲವೋ ಭಕ್ತಿಮಾರ್ಗ ನಡೆಯುತ್ತದೆ. ಆದರೆ ಜ್ಞಾನ ಜ್ಯೋತಿ ಬೆಳಗುತ್ತದೆಯೆಂದರೆ ಕರ್ಮಕಾಂಡಗಳೆಲ್ಲವೂ ಸಮಾಪ್ತಿಯಾಗುತ್ತದೆ. ಏಕೆಂದರೆ ಕರ್ಮಕಾಂಡ ಮಾಡುತ್ತಾ-ಮಾಡುತ್ತಾ ಶರೀರವನ್ನು ಬಿಟ್ಟರೆ ಲಾಭವೇನು ಸಿಕ್ಕಿತು? ಪ್ರಾಲಬ್ಧವಂತು ಆಗಲಿಲ್ಲ, ಕರ್ಮಬಂಧನಗಳ ಲೆಕ್ಕಾಚಾರದಿಂದಂತು ಮುಕ್ತಿ

ಸಿಗುವುದಿಲ್ಲ. ಜನರಂತು ತಿಳಿಯುತ್ತಾರೆ - ಸುಳ್ಳು ಹೇಳದಿರುವುದು, ಕಳ್ಳತನ ಮಾಡದಿರುವುದು, ಯಾರಿಗೂ ದುಃಖ ಕೊಡದಿರುವುದು ಒಳ್ಳೆಯ ಕರ್ಮವಾಗಿದೆ. ಆದರೆ ಇಲ್ಲಂತು ಸದಾಕಾಲಕ್ಕಾಗಿ ಕರ್ಮಗಳ ಬಂಧನಗಳಿಂದ ಮುಕ್ತರಾಗಬೇಕು ಹಾಗೂ ವಿಕರ್ಮಗಳನ್ನು ಬುಡದಿಂದ ತೆಗೆದು ಹಾಕಬೇಕು. ನಾವಂತು ಈಗ ಬಯಸುತ್ತೇವೆ - ಇಂತಹ ಬೀಜವನ್ನು ಬಿತ್ತನೆ ಮಾಡಿರಿ, ಯಾವುದರಿಂದ ಒಳ್ಳೆಯ ಕರ್ಮಗಳ ವೃಕ್ಷವು ಹೊರ ಬರಲಿ. ಆದ್ದರಿಂದ ಮನುಷ್ಯ ಜೀವನದಲ್ಲಿ ತಮ್ಮ ಕಾರ್ಯಗಳನ್ನು ತಿಳಿದುಕೊಂಡು ಶ್ರೇಷ್ಠ ಕರ್ಮ ಮಾಡಬೇಕಾಗಿದೆ. ಉಳಿದಂತೆ ಯಾರು ಪರಮಾತ್ಮನನ್ನು ಎಷ್ಟು ತಿಳಿದಿದ್ದಾರೆ, ಅಷ್ಟೇ ಸಮೀಪದಲ್ಲಿ ಬರುತ್ತಾರೆ. ಇದೆಲ್ಲಾ ರಹಸ್ಯಗಳು ಪಾರಬ್ರಹ್ಮ್‌ಲ್ಲಿರುವ ಪರಮಾತ್ಮನು ಆತಾಳ-ಪಾತಾಳದಿಂದ ಹೊರಗೇನಿದೆ, ಅದನ್ನು ಅವರೇ ಬಂದು ತಿಳಿಸುತ್ತಾರೆ. ಒಳ್ಳೆಯದು. ಓಂ ಶಾಂತಿ.